### ಮೂಗುತಿ

ಹೊಳಪಿನ ವಜ್ರದ ಮೂಗುತಿ ಇಂದು ದುಬಾರಿಯಲ್ಲ. ಅದರೂ ಮುತ್ತು, ಹರಳುಗಳ ದೊಡ್ಡದಾದ ಮೂಗುತಿ ಮೂಗಿನ ಅಂದ ಹೆಚ್ಚಿಸುವುದು. ದೇವಿಯ ರೂಪವನ್ನು ಮದುಮಗಳಲ್ಲಿ ಕಾಣಬೇಕೆಂದರೆ ಮೂಗುತಿ ದೊಡ್ಡದಾಗಿರಬೇಕು. ಮುಂದಲೆ ಚಿನ್ನದ್ದಾದರೆ ಮೂಗುತಿ ಚಿನ್ನದ್ದೇ ಆಗಿರಲಿ. ಬಣ್ಣ ಬಣ್ಣದ ಮುತ್ತು, ರತ್ನ, ಹರಳುಗಳನ್ನು ಹೊಂದಿರುವ ಮುಂದಲೆಗೆ ಅದೇ ರೀತಿಯ ಮೂಗುತಿ ಅಂದವಾಗಿ ಕಾಣುತ್ತದೆ. ಕೈಯಲ್ಲಿ ಸಿಂಪಲ್ ಬಳೆ ಇರಲಿ. ಆದರೆ ರವಿಕೆಯಲ್ಲಿ ಮೂಡಿಬಂದ ವಿನ್ಯಾಸ ನಮ್ಮನ್ನು ಸೆಳೆಯುವಂತಿರಬೇಕು.

### ತಲೆಯ ಆಭರಣಗಳು

ಮದುಮಗಳಿಗೆ ಮುಂದಲೆ ಇಟ್ಟರೆ ಮಾತ್ರ ಅವಳು ಮದುಮಗಳು. ಇಂದಿನ ಫ್ಯಾಷನ್ ಯುಗದಲ್ಲಿ ಮುಂದಲೆಯನ್ನು ಇತರರೂ ತೊಟ್ಟುಕೊಂಡು ಸಂಭ್ರಮಿಸುತ್ತಾರೆ. ಆದರೆ ಉದ್ದದ ಮುಂದಲೆ ಬದಲಾಗಿ ಚಿಕ್ಕ ಮುಂದಲೆ ಬೇಕಾದರೆ ಪೆಂಡೆಂಟ್ ತರದ ವಿನ್ಯಾಸದಲ್ಲಿರುವ ಆಭರಣಕ್ಕೆ ಹುಕ್ ಜೋಡಿಸಿದರಾಯಿತು. ಇದುವೇ ಈಗಿನ ಟ್ರೆಂಡ್. ಕೂದಲಿನಲ್ಲಿ ಸಿಲುಕಿಸಿದಲ್ಲಿ ತಲೆಯಲ್ಲಿ ಎಲ್ಲಿ ಜೋಡಿಸಿದ್ದೇವೆ ಎಂದೇ ತಿಳಿಯುವುದಿಲ್ಲ. ಪುಟ್ಟದಾಗಿ ಎದ್ದು ಕಾಣುತ್ತದೆ. ಅದೇ ರೀತಿ ಜಡೆ ಕೆಳಭಾಗಕ್ಕೂ ಸರದ ಹಿಂಬದಿಯ ಫ್ರೆಡ್ಲೂ ಇಂದು ನೂಲಿನಲ್ಲಿ ಪೋಣಿಸಿದ ಝುಮ್ಕಿ ಲಭ್ಯವಿದೆ. ಚೆನ್ನಲ್ಲೂ ಇದು ಮೆರೆಯುತ್ತದೆ. ಅದೇ ರೀತಿ ಜಡೆಗೆ ಹೂವಿನ ಆಭರಣಗಳಿಂದ, ನವಿಲಿನ ಆಭರಣಗಳಿಂದ ಶೃಂಗರಿಸಬಹುದು. ಸರಗಳಿಂದ ಪೆಂಡೆಂಟ್ ಬೇರ್ಪಡಿಸಲು ಸಾಧ್ಯವಿರುವುದರಿಂದ ಅದನ್ನೇ ಬಳಸಬಹುದು.

ಮದುಮಗಳ ಶೃಂಗಾರವನ್ನು ಆಭರಣಗಳ ವಿಂಗಡಣೆ ಮಾಡಿಯೇ ಮಾಡಬಹುದು.

★ ಕಾಸಿನ ಸರದಲ್ಲೇ ಮದುಮಗಳ ಶೃಂಗಾರ
★ ಮುತ್ತಿನ ಆಭರಣ ಮಾತ್ರ ಧರಿಸಿ ಶೃಂಗಾರ
★ ನವರತ್ನ ಹರಳಿನ ಆಭರಣಗಳಲ್ಲಿ ಮದುಮಗಳು
★ ಆ್ಯಂಟಿಕ್ ಒಡವೆಯಲ್ಲಿ ಮದುಮಗಳು
★ ಕೊಡಗಿನ ಆಭರಣಗಳಲ್ಲಿ ಮದುಮಗಳು
★ ಸಾಂಪ್ರದಾಯಿಕ ಆಭರಣಗಳು
★ ಬಣ್ಣ ಬಣ್ಣದ ನೂಲಿನಲ್ಲಿ ಪೋಣಿಸಿದ ಆಭರಣಗಳ ಉತ್ತರ ಕರ್ನಾಟಕದ ಶೈಲಿ
★ ಪೋಲ್ಕಿ ವಿನ್ಯಾಸದಲ್ಲೇ ಶೃಂಗಾರ
★ ಬಿಳಿ ಹರಳು ಅಥವಾ ಅಮೆರಿಕನ್ ಡೈಮಂಡಲ್ಲಿ ಶೃಂಗಾರ

ಮದುವೆ ಸಮಾರಂಭವೆಂದರೆ ಕೇವಲ ವಿವಾಹದ ಸಂಪ್ರದಾಯಗಳು



ಮಾತ್ರವಲ್ಲ. ನಿಶ್ಚಿತಾರ್ಥ, ಮದುವೆ, ವಧು– ವರರ ಗೃಹ ಪ್ರವೇಶ, ಔತಣ ಕೂಟ, ತಾಯಿ ಮನೆಯ ಬೀಳ್ಕೊಡುಗೆಯ ಸಮಾರಂಭ.. ಹೀಗೆ ಹಲವಾರು ಕಾರ್ಯಕ್ರಮಗಳು ನಡೆಯುತ್ತವೆ. ಆಗ ಆಭರಣಗಳನ್ನು ಜೋಡಣೆ ಮಾಡಿಕೊಂಡು ಒಂದೊಂದು ರೀತಿಯಲ್ಲಿ ಮದುಮಗಳನ್ನು ಶೃಂಗರಿಸಬಹುದು. ಸಾಂಪ್ರದಾಯಿಕ ಆಭರಣಗಳನ್ನು ಮದುವೆ, ಮುಂಜಿಗೆ ಬಳಸಿದರೆ ಪೋಲ್ಕಿ ವಿನ್ಯಾಸದ ಆಭರಣಗಳನ್ನು, ಬಿಳಿ ಹರಳುಗಳ ಆಭರಣಗಳನ್ನು ಔತಣಕೂಟದಂತಹ ಕಾರ್ಯಕ್ರಮಗಳಿಗೆ ತೊಡಿಸಬಹುದು. ಕೈತುಂಬ ಹಣವಿದ್ದರೆ ಚಿನ್ನದ್ದು ಮಾತ್ರವಲ್ಲ, ವಜ್ರದ ಒಡವೆಗಳಲ್ಲೇ ನವವಧುವನ್ನು ಶೃಂಗರಿಸಬಹುದು.

(ಚಿತ್ರಗಳು: ಲೇಖಕಿ ಹಾಗೂ 'ಸುಧಾ' ಸಂಗ್ರಹ)




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ

ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

